# ದೆಹಲಿ ಸರ್ಕಾರದ ಜಲ ವಿನಾಯಿತಿ

ಅರುಣ್‌ಜೇಟ್ಲಿ
ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ

ವಿನಾಯಿತಿಎಂಬುದು ಅನಿರ್ದಿಷ್ಟ ಮೊತ್ತದಷ್ಟಿದ್ದು, ಗುರುತಿಸಲು ಸಾಧ್ಯವಾಗದಜನವರ್ಗಕ್ಕೆ ನೀಡಲಾಗುತ್ತದೆ. ವಿನಾಯಿತಿ ನೀಡುವುದರಿಂದಒಂದು ಸರ್ಕಾರದರ ಇಳಿಸಲು ಸಾಧ್ಯವಿಲ್ಲ ಅಥವಾ ವೆಚ್ಚ ತಗ್ಗಿಸಲು ಸಾಧ್ಯವಾಗದು.ಪ್ರಸ್ತುತ ದರಗಳು ಮತ್ತು ಶುಲ್ಕಗಳು ಮುಂದುವರೆಯುತ್ತವೆ. ತೆರಿಗೆದಾರರ ಹಣದಿಂದಒಂದು ವರ್ಗಕ್ಕೆ ವಿನಾಯಿತಿ ನೀಡಲು ಸಾಧ್ಯ. ವಿನಾಯಿತಿ ಪ್ರಮಾಣ ಹೆಚ್ಚಿಸಿದಷ್ಟು ತೆರಿಗೆಗಳು ಹೆಚ್ಚುತ್ತವೆ. ವಿನಾಯಿತಿಗಳು ಸರ್ಕಾರಕ್ಕೆಅಲ್ಪಾವಧಿಯ ಲಾಭ ಮಾಡಬಹುದು.ಆದರೆ ನಾಳೆಗೆ ಸಾಲದ ಹೊರೆ ಉಳಿಸುತ್ತದೆ.ವಿನಾಯಿತಿಗಳು ದುರ್ಬಲ ವರ್ಗಗಳ ಮೇಲೆ ಪ್ರತಿಕೂಲ ಪ್ರಭಾವ ಬೀರಬಹುದು. ಮೀಟರ್ ವ್ಯವಸ್ಥೆಯಡಿ 20 ಕಿಲೊ ಲೀಟರ್‌ಗೂಕಡಿಮೆ ನೀರು ಬಳಸುವವರಿಗೆ ವಿನಾಯಿತಿದರದಲ್ಲಿ ನೀರು ಪೂರೈಸುವಯೋಜನೆಯನ್ನೇಉದಾಹರಣೆ ತೆಗೆದುಕೊಳ್ಳೋಣ. ವಿನಾಯಿತಿಗಳಿಂದ ವಿತರಣಾ ಸಂಸ್ಥೆಯಆರೋಗ್ಯ ಹದಗೆಡುತ್ತದೆ.ನೀರು ಪೂರೈಕೆ ವ್ಯವಸ್ಥೆ ಹೊರಗಿರುವವರಿಗೂ ನೀರು ಸಂಪರ್ಕಒದಗಿಸುವ ಬಹು ದೊಡ್ಡ ಸವಾಲು ನಮ್ಮ ಮುಂದಿದೆ.ಪ್ರತಿಯೊಂದು ವಾಸಸ್ಥಳಗಳಿಗೂ ಪೈಪ್ ಸಂಪರ್ಕಕಲ್ಪಿಸುವ ಮತ್ತು ಪ್ರತಿಯೊಂದು ಮನೆಗಳಿಗೆ ಕೊಳಾಯಿ ನೀಡುವಕಾರ್ಯವನ್ನುಆರೋಗ್ಯಸ್ಥ ಮಂಡಳಿ ಮಾಡಬಹುದೇ ಹೊರತು, ಆರ್ಥಿಕವಾಗಿದುರ್ಬಲವಾದಡಿಜೆಬಿ ಕೈಯಲ್ಲಿಅದು ಸಾಧ್ಯವಾಗದು.ಜಲ ವಿನಾಯಿತಿಯುದೆಹಲಿಯಅತಿದುರ್ಬಲ ವರ್ಗದವರನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ದೆಹಲಿಯಕಡು ಬಡವರನ್ನು ಜಲ ವಿನಾಯಿತಿಯೋಜನೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಪೈಪ್ ಸಂಪರ್ಕ ಹೊಂದದ ವಾಸಸ್ಥಳಗಳು, ನಲ್ಲಿಯಿಲ್ಲದ ಮನೆಗಳು, ಮೀಟರ್ ಹೊಂದದ ಮನೆಗಳು, ದೋಷಪೂರಿತ ಮೀಟರ್‌ಗಳನ್ನು ಹೊಂದಿದ ಮನೆಗಳಿಗೆ ವಿನಾಯಿತಿ ಲಭ್ಯವಿಲ್ಲ. ಎನ್‌ಡಿಎಂಸಿ ವ್ಯಾಪ್ತಿಯಲ್ಲಿ, ವಿಶೇಷವಾಗಿ ಕನಿಷ್ಠ ವೇತನ ಪಡೆಯುವ ವರ್ಗಗಳು ವಾಸಿಸುವ ಪ್ರದೇಶಗಳಲ್ಲಿ ಮತ್ತುದೆಹಲಿ ದಂಡು ಪ್ರದೇಶದಲ್ಲಿ ನೀರಿಗೆ ವಿನಾಯಿತಿ ಲಭ್ಯವಿಲ್ಲ. ದುರ್ಬಲ ವರ್ಗದಜನರನ್ನು ವಿನಾಯಿತಿಗಳು ಕಡೆಗಣಿಸುತ್ತವೆ ಮತ್ತು ಕೇವಲ ಮೀಟರ್ ವ್ಯವಸ್ಥೆಯಿರುವ ಕೆಲವಾರು ಜನಸಮೂಹಗಳಿಗೆ ಮಾತ್ರಇದರ ಲಾಭದೊರೆಯುತ್ತದೆ.

ದೆಹಲಿಯಲ್ಲಿ 18 ಲಕ್ಷ ನೀರು ಸರಬರಾಜು ಸಂಪರ್ಕಗಳಿವೆ. ಇವುಗಳ ಪೈಕಿ ಕೇವಲ 8.5 ಲಕ್ಷ ಸಂಪರ್ಕಗಳಿಗೆ ಮೀಟರ್‌ಕಾರ್ಯವಹಿಸುತ್ತಿವೆ. ಸುಮಾರುಐದು ಲಕ್ಷ ಮೀಟರ್‌ಗಳು ಕಾರ್ಯವಹಿಸುತ್ತಿಲ್ಲಅಥವಾದೋಷಪೂರಿತವಾಗಿವೆ. ಉಳಿದವು ಮೀಟರನ್ನೇ ಹೊಂದಿಲ್ಲ. ದೆಹಲಿಯ ಬಹುಪಾಲು ಗುಡಿಸಲುಗಳಿಗೆ ನೀರಿನ ಸಂಪರ್ಕವೇಇಲ್ಲ ಮತ್ತು ಅವುಗಳು ಉಚಿತ ನೀರು ಸರಬರಾಜುಯೋಜನೆಯಿಂದ ವಂಚಿತವಾಗಿವೆ. ಅಲ್ಲಿಯ ವಾಸಿಗಳು ಟ್ಯಾಂಕರ್ ನೀರಿನ ಮೇಲೆ ಅವಲಂಬಿತರಾಗಿದ್ದಾರೆ. ಹಲವಾರುಅನಧಿಕೃತ ಬಡಾವಣೆಗಳು ಪೈಪ್ ಸಂಪರ್ಕಗಳನ್ನೇ ಹೊಂದಿಲ್ಲ ಮತ್ತು ಅವುಗಳಿಗೆ ಪೈಪ್ ಸಂಪರ್ಕಕಲ್ಪಿಸುವಅಗತ್ಯವಿದೆ. ಪ್ರತಿಯೊಂದು ಮನೆಗಳಿಗೆ ನೀರಿನ ಸರಬರಾಜುಇಲ್ಲದ ಪ್ರದೇಶದಲ್ಲಿಉಚಿತ ನೀರಿನಯೋಜನೆಅನ್ವಯವಾಗುವುದಿಲ್ಲ. ಹಲವಾರು ಸಹಕಾರಿ ವಸತಿ ಸಮುಚ್ಚಯಗಳು ಸಗಟು ನೀರಿನ ಸಂಪರ್ಕಗಳನ್ನು ಹೊಂದಿವೆ ಮತ್ತು ವೈಯಕ್ತಿಕ ಸಂಕೀರ್ಣಗಳಿಗೆ ಮೀಟರ್ ಅಳವಡಿಸಲಾಗಿಲ್ಲ. ಇವುಗಳಿಗೂ ಉಚಿತ

ನೀರಿನಯೋಜನೆಅನ್ವಯವಾಗುವುದಿಲ್ಲ. ದೆಹಲಿಯ ಮೀಟರ್ ಅಳವಡಿಸಿಕೊಂಡ ಕೆಲವಾರು ಮಧ್ಯಮ ವರ್ಗದವರು ಮಾಸಿಕ 20 ಕಿಲೊ ಲೀಟರ್ಅಂದರೆ ಪ್ರತಿನಿತ್ಯ 666 ಲೀಟರ್ ಮೀರದಂತೆ ನೀರು ಬಳಸಿದವರಿಗೆ ಮಾತ್ರಉಚಿತ ನೀರಿನಯೋಜನೆಅನ್ವಯವಾಗುತ್ತದೆ. ನೀರಿನ ಬಳಕೆ ಪ್ರಮಾಣ 20 ಕಿಲೊ ಲೀಟರ್ ಮೀರಿದರೆಅಂತಹಗ್ರಾಹಕರು ಸಂಪೂರ್ಣದರ ಪಾವತಿಸುವಜೊತೆಗೆ ಶೇಕಡ 10ರ ಹೆಚ್ಚಿನ ಹೊರೆಯನ್ನೂ ಹೊರಬೇಕಾಗುತ್ತದೆ.ಈ ಆಧಾರದ ಮೇಲೆ ದೆಹಲಿಯನ್ನು ನಾಲ್ಕು ವರ್ಗಗಳಲ್ಲಿ ವಿಂಗಡಿಸಬಹುದು.ಮೊದಲನೆಯದು, ನಲ್ಲಿಅಥವಾ ನೀರಿನ ಸಂಪರ್ಕವಿಲ್ಲದವರ ವರ್ಗ.ಇವರುಯೋಜನೆಯ ವ್ಯಾಪ್ತಿಗೆ ಬರುವುದಿಲ್ಲ. ದೋಷಪೂರಿತಅಥವಾ ಮೀಟರ್ ಅಳವಡಿಸಿಕೊಳ್ಳದ ಗ್ರಾಹಕರೂ ಸಹ ಯೋಜನೆಯ ವ್ಯಾಪ್ತಿಗೆ ಬಾರದೆ ಪೂರ್ಣ ಶುಲ್ಕ ಪಾವತಿಸಬೇಕಾಗುತ್ತದೆ.ಕೇವಲ ಕಾರ್ಯವಹಿಸುವ ಮೀಟರ್ ಹೊಂದಿದ ಮತ್ತು ತಿಂಗಳಿಗೆ 20 ಕಿಲೋ ಲೀಟರ್ ಬಳಕೆ ಮೀರದಗ್ರಾಹಕರಿಗೆ ಮಾತ್ರಉಚಿತ ನೀರಿನಯೋಜನೆ ಲಾಭ ಲಭ್ಯ.ಚಾಲನೆಯಲ್ಲಿರುವ ಮೀಟರ್ ಹೊಂದಿದ, ನೀರಿನ ಬಳಕೆ ಪ್ರಮಾಣ 20 ಕಿಲೊ ಲೀಟರ್ ಮೀರಿದವರು ಶೇಕಡ 10ರ ಹೆಚ್ಚಿನದರ ಪಾವತಿಸಬೇಕು.ಮೇಲ್ಕಂಡ ನಾಲ್ಕು ವರ್ಗಗಳಲ್ಲಿ ಕೇವಲ ಒಂದು ವರ್ಗದ ಕೆಲವರಿಗೆ ಮಾತ್ರಉಚಿತ ನೀರಿನ ಸೌಲಭ್ಯದೊರೆಯಲಿದೆ.ಅಂಥವರಲ್ಲಿದುರ್ಬಲ ವರ್ಗದವರಿಲ್ಲ.

**************